<u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಕರ್ನಾಟಕ ವಸತಿ ಶಾಲಾ 6ನೇ ತರಗತಿ ಪ್ರವೇಶಕ್ಕೆ ಪರಿಷ್ಕೃತ ಮಾರ್ಗಸೂಚಿ ಹೊರಡಿಸುವ ಬಗ್ಗೆ.

**ಓದಲಾಗಿದೆ:** ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಪತ್ರ ಸಂಖ್ಯೆ: ಕವಶಿಸಸ/ಶಿಕ್ಷಣ(1)/ಸಿಆರ್-18/2019-20, ದಿನಾಂಕ:28.02.2020.

******

<u>ಪ್ರಸ್ತಾವನೆ:</u>

ರಾಜ್ಯದಲ್ಲಿ ವಿವಿಧ ವರ್ಗಗಳ ಗ್ರಾಮೀಣ ಪ್ರದೇಶದ ಬಡ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ 824 ಮೊರಾರ್ಜಿ ದೇಸಾಯಿ / ಕಿತ್ತೂರ್ ರಾಣಿ ಚನ್ನಮ್ಮ / ಡಾ|| ಬಿ.ಆರ್. ಅಂಬೇಡ್ಕರ್ / ಅಟಲ್ ಬಿಹಾರ್ ವಾಜಪೇಯಿ / ಶ್ರೀಮತಿ ಇಂದಿರಾ ಗಾಂಧಿ / ಏಕಲವ್ಯ ಮಾದರಿ ವಸತಿ ಶಾಲೆ / ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ. ಈ ಶಾಲೆ / ಕಾಲೇಜುಗಳನ್ನು ಒಂದೇ ಕಾರ್ಯವ್ಯಾಪ್ತಿಗೆ ಒಳಪಡಿಸುವ ಉದ್ದೇಶದಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಈ ಶಾಲೆ / ಕಾಲೇಜುಗಳು 6 ರಿಂದ 12ನೇ ತರಗತಿಯವರೆಗೆ ಕಾರ್ಯನಿರ್ವಹಿಸುತ್ತಿವೆ. ಈ ಶಾಲೆಗಳ ಪೈಕಿ 798 ವಸತಿ ಶಾಲೆಗಳ 6ನೇ ತರಗತಿಗೆ ಲಭ್ಯವಾಗುವ 40,420 ಸೀಟುಗಳಿಗೆ ವಿದ್ಯಾರ್ಥಿಗಳನ್ನು ದಾಖಲೆ ಮಾಡಲು ಅನುಸರಿಸಬೇಕಾದ ಪ್ರವೇಶ ಪರೀಕ್ಷೆ ವಿದ್ಯಾರ್ಥಿಗಳ ಸಂಖ್ಯೆ, ವರ್ಗವಾರು ಮೀಸಲಾತಿ, ವಿಶೇಷ ವರ್ಗಗಳಿಗೆ ಅವಕಾಶ ಪರೀಕ್ಷಾ ಮಾರ್ಗಸೂಚಿಗೆ ಸಂಬಂಧಿಸಿದಂತೆ ಪರಿಷ್ಕೃತ ಆದೇಶ ಹೊರಡಿಸುವಂತೆ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು ಮೇಲೆ ಓದಲಾದ ದಿನಾಂಕ:28.02.2020 ರ ಪ್ರಸ್ತಾವನೆಯಲ್ಲಿ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಡಿ ಬರುವ ವಸತಿ ಶಾಲೆ / ಕಾಲೇಜುಗಳಿಗೆ ಪ್ರವೇಶ ಕಲ್ಪಿಸುವ ಸಂಬಂಧ ಹೊರಡಿಸಲಾದ ಎಲ್ಲಾ ಆದೇಶಗಳನ್ನು ರದ್ದುಪಡಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಸಕಇ 94 ಮೊದೇಶಾ 2020, ಬೆಂಗಳೂರು, ದಿನಾಂಕ:10.03.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ 824 ಮೊರಾರ್ಜಿ ದೇಸಾಯಿ / ಕಿತ್ತೂರ್ ರಾಣಿ ಚನ್ನಮ್ಮ / ಡಾ|| ಬಿ.ಆರ್. ಅಂಬೇಡ್ಕರ್ / ಅಟಲ್ ಬಿಹಾರ್ ವಾಜಪೇಯಿ / ಶ್ರೀಮತಿ ಇಂದಿರಾ ಗಾಂಧಿ / ಏಕಲವ್ಯ ಮಾದರಿ ವಸತಿ ಶಾಲೆ / ಕಾಲೇಜುಗಳ ಪೈಕಿ 798 ವಸತಿ ಶಾಲೆಗಳಿಗೆ 6ನೇ ತರಗತಿಗೆ ಲಭ್ಯವಾಗುವ ಸೀಟುಗಳಿಗೆ ಅನುಗುಣವಾಗಿ ಪ್ರವೇಶ ಕಲ್ಪಿಸಲು ಈ ಕೆಳಕಂಡ ನಿಬಂಧನೆ ಮತ್ತು ಷರತ್ತುಗೊಳಪಟ್ಟು ಅನುಮೋದನೆ ನೀಡಿ ಆದೇಶಿಸಿದೆ.

<u>ನಿಬಂಧನೆ / ಷರತ್ತು / ಮಾರ್ಗಸೂಚಿಗಳು</u>

1. <u>ಪ್ರವೇಶ ಸಂಖ್ಯೆ:</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯ ನಿರ್ವಹಿಸುವ ವಸತಿ ಶಾಲೆಗಳನ್ನು ಮೊರಾರ್ಜಿ ದೇಸಾಯಿ / ಕಿತ್ತೂರು ರಾಣಿ ಚೆನ್ನಮ್ಮ / ಡಾ|| ಬಿ.ಆರ್ ಅಂಬೇಡ್ಕರ್ / ಶ್ರೀಮತಿ ಇಂದಿರಾ ಗಾಂಧಿ / ಅಟಲ್ ಬಿಹಾರಿ

ವಾಜಪೇಯಿ / ಏಕಲವ್ಯ / ಕವಿರನ್ನ / ಮಾಸ್ತಿ ವೆಂಕಟೇಶ ಅಯ್ಯಂಗರ್ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತಿದೆ. ಆ ಶಾಲೆಗಳ ಪ್ರವೇಶ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ವಸತಿ ಶಾಲೆ | 6ನೇ ತರಗತಿಗೆ ಮಂಜೂರಾದ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆ | 50 |
| 2 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ | 50 |
| 3 | ಡಾ|| ಬಿ.ಆರ್ ಅಂಬೇಡ್ಕರ್ ವಸತಿ ಶಾಲೆ | 50 |
| 4 | ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ | 50 |
| 5 | ಮಾಸ್ತಿ ವೆಂಕಟೇಶ ಅಯ್ಯಂಗರ್ ವಸತಿ ಶಾಲೆ | 50 |
| 6 | ಸಂಗೊಳ್ಳಿ ರಾಯಣ್ಣ ವಸತಿ ಶಾಲೆ | 50 |
| 7 | ಅಲೆಮಾರಿ ವಸತಿ ಶಾಲೆ | 50 |
| 8 | ಕವಿರನ್ನ ವಸತಿ ಶಾಲೆ | 50 |
| 9 | ಗಾಂಧಿತತ್ವ ವಸತಿ ಶಾಲೆ | 50 |
| 10 | ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ ವಸತಿ ಶಾಲೆ | 50 |
| 11 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ | 80 |
| 12 | ಏಕಲವ್ಯ ಮಾದರಿ ವಸತಿ ಶಾಲೆ | 60 |

2. <u>ವರ್ಗವಾರು ಸ್ಥಾನ ಹಂಚಿಕೆ:</u>

1. <u>ವರ್ಗವಾರು ಪ್ರವೇಶ ಸಂಖ್ಯೆ:-</u> ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಸಾಮಾನ್ಯ ವರ್ಗದ ವಸತಿ ಶಾಲೆಗಳಿಗೆ ವಿವಿಧ ಸರ್ಕಾರದ ಆದೇಶಗಳಲ್ಲಿ ಶೇಕಡವಾರು ಪ್ರವೇಶ ಸಂಖ್ಯೆಯನ್ನು ಕಲ್ಪಿಸಿ ಆದೇಶಲಾಗಿತ್ತು. ಶೇಕಡವಾರು ಆಧಾರದ ಮೇಲೆ ಪ್ರವೇಶ ಕಲ್ಪಿಸುವಾಗ ಬೆಸ ಸಂಖ್ಯೆ ಬಂದಾಗ ಉಂಟಾಗಬಹುದಾದ ಸಮಸ್ಯೆಯನ್ನು ಹೋಗಲಾಡಿಸಲು ಸಂಖ್ಯೆ ಆಧಾರದ ಮೇಲೆ ಸ್ಥಾನಗಳನ್ನು ಹಂಚಿಕೆ ಮಾಡುವುದು.

| ಕ್ರ. ಸಂ. | ವಸತಿ ಶಾಲೆ | ಪ.ಜಾತಿ | ಪ.ಪಂಗಡ | ಹಿಂ.ವರ್ಗ | ಸಾಮಾನ್ಯ | ಒಟ್ಟು |
|---|---|---|---|---|---|---|
| 1 | ಸಮಾಜ ಕಲ್ಯಾಣ ಇಲಾಖೆಯಿಂದ ಅನುಧಾನ ಒದಗಿಸುವ (ಅನುಸೂಚಿತ ಜಾತಿಯ ವಸತಿ ಶಾಲೆಗಳು) | 38 | 05 | 07 | 0 | 50 |

| | | | | | | |
|---|---|---|---|---|---|---|
| 2 | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಧಾನ ಒದಗಿಸುವ ಪ.ಪಂಗಡದ ವಸತಿ ಶಾಲೆಗಳು | 05 | 38 | 07 | 0 | 50 |
| 3 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅನುಧಾನ ಒದಗಿಸುವ ವಸತಿ ಶಾಲೆಗಳು | 07 | 05 | 38 | 0 | 50 |
| 4 | ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ (ಸಾಮಾನ್ಯ) | 08 | 05 | 12 | 25 | 50 |
| 5 | ಏಕಲವ್ಯ ಮಾದರಿ ವಸತಿ ಶಾಲೆಗಳು | 04 | 54 | 02 | 0 | 60 |
| 6 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಪ.ಜಾತಿ) | 60 | 08 | 12 | 0 | 80 |
| 7 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಪ.ಪಂಗಡ) | 08 | 60 | 12 | 0 | 80 |
| 8 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಹಿಂ.ವರ್ಗ) | 12 | 08 | 60 | 0 | 80 |

- ❖ ಅಲೆಮಾರಿ ವಸತಿ ಶಾಲೆಗೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಘೋಷಿಸಲಾಗಿರುವ ಅಲೆಮಾರಿ ವರ್ಗದ ಅಭ್ಯರ್ಥಿಗಳಿಗೆ ಶೇಕಡ 100ರಷ್ಟು ಪ್ರವೇಶ ಕಲ್ಪಿಸುವುದು.
- ❖ ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ 28 ವಸತಿ ಶಾಲೆಗಳಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಶೇ 50% ರಷ್ಟು ಸ್ಥಾನಗಳನ್ನು ಹಂಚಿಕೆ ಮಾಡುವುದು. ಸಾಮಾನ್ಯ ವರ್ಗದ ಸ್ಥಾನಗಳಿಗೆ ಆದಾಯ ಪರಿಮಿತಿ ಇಲ್ಲದೆ ಎಲ್ಲಾ ವರ್ಗದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

3. <u>ವಿಶೇಷ ವರ್ಗಗಳಿಗೆ ಸ್ಥಾನ ಹಂಚಿಕೆ:</u>

| ಕ್ರ. ಸಂ. | ವರ್ಗ | ಹಂಚಿಕೆ | 50 ಸಂಖ್ಯೆ | 60 ಸಂಖ್ಯೆ | 80 ಸಂಖ್ಯೆ |
|---|---|---|---|---|---|
| 1. | ಆಶ್ರಮ ಶಾಲೆ | ಶೇ. 10 | 5 | 6 | 8 |
| 2. | ಅಲೆಮಾರಿ-ಅರೆ ಅಲೆಮಾರಿ, ಸೂಕ್ಷ್ಮ-ಅತಿ ಸೂಕ್ಷ್ಮ | ಶೇ. 10 | 5 | 6 | 8 |
| 3. | ಅಂಗವಿಕಲ | ಶೇ. 4 | 2 | 2 | 3 |
| 4. | ಮಾಜಿ ಸೈನಿಕ | ಶೇ. 4 | 2 | 2 | 3 |
| 5. | ದುರ್ಬಲ ವರ್ಗ | ಶೇ. 5 | 3 | 4 | 5 |
| 6. | ಸಫಾಯಿ ಕರ್ಮಚಾರಿ | ಶೇ. 5 | 2 | 3 | 3 |